ಯಾತ ಕಿರುಗುಟ್ಟೋದು ನಿಂದ್ದಾಂಗ
ನಾನೀನ ನುಡಿ ನುಂಗಿ ತಾನೀನ ತಾನೆ ತಾ
ತಾನಾಗಿ ತನನನ ಬಂದ್ದಾಂಗ
12
ರಂಗೊಂದು ದಂಗೊಂದು ಗುಂಗೊಂದು ಒಂದಕ್ಕೊಂದು
ಹತ್ತಾಗಿ ಜತ್ತಾಗಿ ಸುಳಿದ್ದಾಂಗ
ದಣಿದ ಜೀವದ ಮ್ಯಾಲೆ ಜೇನಿನ ಸುರಿಮಳಿ
ಜೇಂಗುಟ್ಟಿ ಹನಿಹನಿ ಇಳಿದ್ದಾಂಗ
13
ಪ್ರಕೃತಿ ಪುರುಷಗೆ ಸೋತು ಪ್ರಾಣದ್ದಂಜಿಯೆ ನೂತು
ಅನುಭವದ ಕಿವಿಮಾತು ಆದ್ದಾಂಗ
ಹಾಸಾದ ಹಾಡೀಗೆ ಹೊಕ್ಕಾತು ಕಿನ್ನರಿ
ನೆಯ್ಗಿಯೊಳಗೆ ನೂಲು ಹೋದ್ದಾಂಗ
14
ಜೀವದ ರಸ ಹಿಂಡಿ ತುಂತೂರು ಮಳೆಯಾಗಿ
ತಂತಿಯ ತುಂಬೆಲ್ಲ ಸಿಡಿದ್ದಾಂಗ
ಮರುಳಸಿದ್ಧನ ಕೈಯ್ಯಕಿನ್ನರಿಯಾಗಿ ಸಿಕ್ಕ
ಮಾಯೆಯ ಮೈಗೆ ಮೈ ನುಡಿದ್ದಾಂಗ

'ಚತುರ್ಮುಖ ದರ್ಶನ'ದ ಹುಡುಕಾಟದ ಪ್ರಕ್ರಿಯೆಯಲ್ಲಿ ಶಬ್ದ ಶರೀರಿಯಾದ ಕಾವ್ಯ ಶಬ್ದ–ಅರ್ಥಗಳ ಮಿತಿಗೆ ಒಳಪಡದೆ ಒಡಂಬಡುವ ಕಾವ್ಯವಾಗಬೇಕಾಗಿದೆ. ದೇಹದ ಅನುಭವ ಅದನ್ನು ಮೀರುವ ಶೃಂಗಾರಕ್ಕೆ ತೊಡಕಾಗಬಾರದು. ಹಾಗಾಗಿ ಗಂಡು–ಹೆಣ್ಣಿನ ಶೃಂಗಾರದ ಆಪ್ತ ಚೇಷ್ಟೆಗಳೆಲ್ಲ ಹೋಲಿಕೆ, ವಿವರಗಳಲ್ಲಿ ಐಹಿಕ ಸೌಂದರ್ಯವೃದ್ಧಿಗೆ ಕಾರಣವಾಗುತ್ತವೆ. ಸಿಂಗಾರ ಸೊಳ್ಳಿ, ಗುಂಗಿಯ ಹುಳ, ಕುನ್ನಿ ಕುಣಿಗುಡುವಾಟ, ವಯ್ಯಾರ, ಸುಳ್ಳಿನ ಸಿಡಿಮಿಡಿಗಳೆಲ್ಲ ಇಂದ್ರಿಯಗಳ ಮೂಲಕ ಪಡೆಯುವ ಶೃಂಗಾರ ಸೌಂದರ್ಯದ ವಾತಾವರಣವನ್ನು ನಿರ್ಮಿಸುತ್ತವೆ. ಮೊದಲ ಭೆಟ್ಟಿಗೆ ಬಂದ ಮಳ್ಹೆಣ್ಣು, ಶೃಂಗಾರದಲ್ಲಿ ಅರ್ಥ ಬಯಸದ ಆಪ್ತ ಮಾತುಗಳೆಲ್ಲ ಬಯಸುವುದು 'ಸಕ್ಕರೆ ಬೆರೆದ್ದಾಂಗ ಹಾಲಾಗ' ಆಗುವ ಸ್ಥಿತಿಯನ್ನು. ಅದಕ್ಕಾಗಿ ಮಾಯೆಯೇ ಮೈಯೊಳಗೆ ಬಂದಾಂಗ ಗೆಜ್ಜಿ ಪೈಜಣ್ಣ ಕಟ್ಟಿ ಕುಣಿಯಬೇಕಾಗುತ್ತದೆ. 'ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ' ಮಾಡಿಕೊಂಡಾಗ ಕುಣಿತದ ಗೆಜ್ಜೆ–ಪೈಜಣದ ನಾದ ಮತ್ತು ಲಯಗಳು ಶ್ರುತಿ ಹಿಡಿದು ಜತಿಯಾಗಿ ನಡೀತದೆ. ಆಗ ಐಂದ್ರಿಕ ಸ್ಪರ್ಶದ ಅನುಭವ ಅದರಿಂದ ಮೇಲಿನ ಸ್ತರಕ್ಕೆ ಏರುತ್ತದೆ. ('ಹಿಗ್ಗಿನ ಮುಳ್ಳಿಗೆ ಸಿಕ್ಕಾ್ಂಗ') ಮತ್ತು ಪ್ರಕೃತಿಯ ಸಹಜ ವ್ಯಾಪಾರದ (ಬಸಿರ ಹೂ) ಭಾಗವಾಗಿಯೇ ಈ ಜೀವ ಸೌಂದರ್ಯವೂ ಬೆಳಗುತ್ತದೆ.

ಈ ಐಂದ್ರಿಕ ಅನುಭವದ ನಾದಲಯವೂ ಕವಿಗೆ ಮುಖ್ಯ. ಅಲ್ಲಿ 'ಜುಮ್ ಜುಮು ರುಮು ಜುಮು ಗುಂಗುಣಿ ದುಮುದುಮು' ಎಂಬ ನಾದದ ನದಿಯೊಂದು ನಡೆದ ಭಾಷಾನುಭವವಿದೆ. ಅದು ಅರ್ಥ ಪ್ರಾಧಾನ್ಯವಾದ್ದೂ ಅಲ್ಲ. ಶಬ್ದ ಮಹತ್ತಿನದೂ ಅಲ್ಲ. ಆ ಸಮಶ್ರುತಿ ನಲ್ಲ ನಲ್ಲೆಯರು ಇರುಳು ಗಲ್ಲಕೆ ಗಲ್ಲ ಹಚ್ಚಿ, 'ಗುಜು ಗುಜು ಗುಲು ಗುಲು' ನುಡಿದ್ದಾಂಗ. ಒಂದು ಸೌಂದರ್ಯಾನುಭವದಲ್ಲಿ ಮಾತು–ಅರ್ಥಗಳೆರಡೂ ವ್ಯರ್ಥ ಅನಿಸುವ ಭಾವಸ್ಥಿತಿಯನ್ನು ಕವಿ ಭಾಷೆಯ ಮೂಲಕವೇ ಹೇಳಬೇಕಾಗಿದೆ.

ಮುಂದೆ ಹೆಣ್ಗಂಡು ಜೇನ್ನೊಣಗಳ ಚಿತ್ರ ಸಂಜೀಯ ಮುಗಿಲಿನ ರೊಇೌ ಬಿಲ್ಲ ಪಟ (ಗಾಳಿಪಟ) ಗಾಳಿ ಸುಳಿಗೆ ಶ್ರುತಿ ಹಿಡಿವ ಚಿತ್ರ ನಾರದನ ವೀಣೆಯ ಹಾಡೀನ ತೆರೆಗಳನ್ನು ನೆನಪಿಸುತ್ತವೆ. ಬಹಳ ಸ್ಪಷ್ಟವಾಗಿ ಗಾಳಿಪಟ ಮತ್ತು ಅದನ್ನು ಮೀರಿದ ನಾರದನ ಗಗನ ಸಂಚಾರದ ದೈವಿಕ ಹಾಡಿನ ಸೂಚನೆಯ ಮೂಲಕ